ಎಂಬ ನಾಟಕವನ್ನು ಬರೆದಿದ್ದೆ. ಆಗ ಕನ್ನಡ ಉಪನ್ಯಾಸಕರಾಗಿದ್ದ ಎಂ.ಎಸ್. ರಾಮಲಿಂಗಪ್ಪನವರು ನನಗೆ ಉತ್ತೇಜನ ನೀಡಿದರು. ಈ ನಾಟಕ ಕೆಲವು ಪ್ರದರ್ಶನಗಳನ್ನೂ ಕಂಡಿತು. ಮುಂದೆ ನಾನು ಪಾವಗಡ ತಾಲ್ಲೂಕಿನ ಕೊಂಡೆತಿಮ್ಮನಹಳ್ಳಿಯಲ್ಲಿ ಪ್ರೌಢಶಾಲೆ ಶಿಕ್ಷಕನಾಗಿದ್ದಾಗ ವಿದ್ಯಾರ್ಥಿಗಳಿಗಾಗಿ ಐದಾರು ನಾಟಕಗಳನ್ನು ಬರೆದೆ, ಆಡಿಸಿದೆ, ನಟಿಸಿದೆ. ಆದರೆ, ಬೆಂಗಳೂರಿಗೆ ಬಂದು ಹೊಸ ಪ್ರಯೋಗಗಳನ್ನು ನೋಡಿದಾಗ, ನನ್ನ ಎಲ್ಲ ಇತಿಮಿತಿಗಳು ಗೊತ್ತಾದವು. 'ಮುಳ್ಳು ಹಾದಿ', 'ಕಪ್ಪು ಹಲಗೆ' ಎಂಬ ಎರಡು ನಾಟಕಗಳನ್ನು ಹೊರತುಪಡಿಸಿ ಉಳಿದ ನನ್ನ ಯಾವ ನಾಟಕಗಳನ್ನೂ ಪ್ರಕಟಿಸಲಿಲ್ಲ. ಅಷ್ಟರ ಮಟ್ಟಿಗೆ ನಾನು ಕನ್ನಡ ನಾಟಕ ಸಾಹಿತ್ಯಕ್ಕೆ ಉಪಕಾರ ಮಾಡಿದೆ! ಯಾಕೆಂದರೆ, ನಾಟಕ ನನ್ನ ಅಭಿವ್ಯಕ್ತಿ ಪ್ರಕಾರ ಆಗಲಿಲ್ಲ. ಮುಂದೆ, ಕವಿತೆಗಳನ್ನು ಬರೆದೆ; ಕತೆ, ಕಾದಂಬರಿಗಳನ್ನು ಹೆಚ್ಚು ಬರೆದೆ. ಸಾಹಿತ್ಯ ಮತ್ತು ಸಮಾಜದ ವಿಶ್ಲೇಷಣಾ ಲೇಖನಗಳನ್ನು ಬರೆದೆ. ವಿವಿಧ ಪತ್ರಿಕೆಗಳಿಗೆ ಅಂಕಣ ಬರಹಗಳನ್ನು ನಿರಂತರವಾಗಿ ಬರೆಯುತ್ತ ಬಂದೆ. ಈ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿದ್ದೇನೆ. ನಾನು ಬದುಕುತ್ತಿರುವ ಜನಸಮಾಜ ಮತ್ತು ಜನಸಂಸ್ಕೃತಿಗಳ ಜೊತೆ ಸಂವಾದಿಸುತ್ತಲೇ ನನ್ನ ಸಾಹಿತ್ಯ ಸೃಷ್ಟಿ ಸಾಗುತ್ತಿದೆ.



◆ **ಬಂಡಾಯ ಸಾಹಿತ್ಯ ಸಂಘಟನೆಯ ಕಲ್ಪನೆ ಬಂದದ್ದು ಯಾವಾಗ ಮತ್ತು ಹೇಗೆ?**

ಬಂಡಾಯ ಸಾಹಿತ್ಯ ಸಂಘಟನೆಯು ಒಂದು ವಿಶಿಷ್ಟ ಸಂದರ್ಭದಲ್ಲಿ ಹುಟ್ಟಿತು. ಅದಕ್ಕೆ ಆ ಕಾಲದ ಸಾಮಾಜಿಕ ಸಾಂಸ್ಕೃತಿಕ ಕಾರಣಗಳಿವೆ. ಯಾವುದೊ ಒಂದು ಘಟನೆಯಿಂದಲೇ ಇಡೀ ಸಂಘಟನೆ ಮತ್ತು ಚಳವಳಿ ಹುಟ್ಟಿತು ಎಂದು ಹೇಳುವುದು ಪೂರ್ಣ ಸತ್ಯವಲ್ಲ; ಚಾರಿತ್ರಿಕ ಕಾರಣವೂ ಅಲ್ಲ. ದೊಡ್ಡ ಚಳವಳಿ ಮತ್ತು ಸಂಘಟನೆ ಹುಟ್ಟಲು ಹಿನ್ನೆಲೆಯಾಗಿ ಚಾರಿತ್ರಿಕತೆ ಮತ್ತು ಚಲನಶೀಲತೆಯ ಅಂಶಗಳು ಪ್ರೇರಣೆಯಾಗಿ ಕೆಲಸ ಮಾಡುತ್ತವೆ. ಯಾವುದೋ ಒಂದು ಘಟನೆಯಷ್ಟೇ ಪ್ರೇರಣೆಯಾಗಿದ್ದರೆ ಒಂದು ಸಮ್ಮೇಳನಕ್ಕೇ ಅದು ಮುಕ್ತಾಯವಾಗುವ ಸಂಭವ ಹೆಚ್ಚು. ಅದೊಂದು ಪರ್ಯಾಯ ಸಮ್ಮೇಳನ ಆಗುತ್ತದೆಯೇ ಹೊರತು ಸಂಘಟನೆಯ ಸ್ವರೂಪದಲ್ಲಿ ಮುಂದುವರೆಯುವುದಿಲ್ಲ.

ಮೊದಲನೇ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸಿದವರಲ್ಲಿ ನಾನೂ ಒಬ್ಬ. ಡಿ.ಆರ್. ನಾಗರಾಜ್, ಕಾಳೇಗೌಡ ನಾಗವಾರ, ಸಿದ್ದಲಿಂಗಯ್ಯ, ರಾಮದೇವ ರಾಕೆ, ಪ್ರಸನ್ನ, ಸಿಜಿಕೆ, ಇಂದೂಧರ ಹೊನ್ನಾಪುರ ಮುಂಚೂಣಿಯಲ್ಲಿದ್ದು ಬೆಂಗಳೂರಿನಲ್ಲಿ ಸಮ್ಮೇಳನವನ್ನು ಸಂಘಟಿಸಿದರು. ರಾಜ್ಯದ ಅನೇಕ ಕಡೆಯಿಂದ ಚಂಪಾ, ಚೆನ್ನಣ್ಣ ವಾಲೀಕಾರ್ ಮುಂತಾದ ಬರಹಗಾರರ ಬಳಗ ಅಭೂತಪೂರ್ವ ಬೆಂಬಲ ನೀಡಿತು. ರಾಜ್ಯದಾದ್ಯಂತ ಹರಿದುಬಂದ ಬೆಂಬಲದಿಂದ 'ಸಂಘಟನೆ' ರೂಪುಗೊಂಡಿತು. ಆದರೆ, ಮೊದಲು ಆರಂಭವಾದದ್ದು ಒಂದು ಪರ್ಯಾಯ ಸಮ್ಮೇಳನ